Sri D. B. KALMANKAR.—May I know whether in that taluk any villages are without primary schools and if so how many?

Sri N. M. KOTRABASAIAH SOGI.—This question must be answered by the Revenue Department. As for as Education Department is concerned, there are schools in almost all the villages.

ಶ್ರೀ ರಾಚಪ್ಪ ಪಾಲ.—ಎಷ್ಟೋ ಸ್ಕೂಲುಗಳು ಗುಡಿಗಳಲ್ಲ ನಡೆಯುತ್ತಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎನ್. ಎಂ. ಕೊತ್ರಬಸಯ್ಯ ಸೋಗಿ.—ಅದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ನಿವಾರಿಸುವುದಕ್ಕೆ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡಿನವರು ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ತಾಲ್ಲೂಕು ಬೋರ್ಡಿನವರಿಗೆ ಅದು ಅಬ್ಲಿಗೇಟರಿ ಡ್ಯೂಟಿ, ಅದನ್ನು ಮಾಡಲೇಬೇಕು. ಮಹಾತ್ಮ ಗಾಂಧಿ ಶತಮಾನೋತ್ಸವ ವರ್ಷದಲ್ಲಿ ಒಂದು ವಿಶೇಷವಾದ ಯೋಜನೆಯನ್ನು ಇಟ್ಟುಕೊಂಡು ಮಾಡಿದ್ದಾರೆ. ಈಗ 2 ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಈ ವರ್ಷ ಹೆಚ್ಚು ಹಣವನ್ನು ಈ ಯೋಜನೆಗೆ ಉಪಯೋಗಿಸಿಕೊಂಡು ಈ ಕಾರ್ಯವನ್ನು ಮುಂದುವರಿಸಬಹುದು.

Supply of Mechanised Fishing Boats

153. Sri B. M. IDINABBA (Mangalore).—

Will the Minister of State for Ports and Fisheries be pleased to state:—

(*a*) the number of mechanised Fishing boats supplied in the State up-to-date;

(*b*) the increase in the number of these boats by the end of 1969;

(*c*) whether Government itself will obtain and supply Foreign Marine Engine to Fishermen;

(*d*) the number of applications out of the applications received for the sanction of mechanised boats still pending with the Government;

(*e*) whether it has come to their notice that the boats have been given to non-fishermen other than the actual fishermen?

Sri H. C. LINGA REDDY (Minister of State for Ports and Fisheries).—

(*a*) 606.

(*b*) 731.

(*c*) As the Central Government have stopped the import of Foreign Marine engines it is not possible to supply such engines to Fishermen now.

(*d*) 50 (Fifty).

(*e*) No.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯದಲ್ಲಿ ಈವರೆಗೆ 606 ಯಾಂತ್ರಚಾಲಿತ ದೋಣಿಗಳನ್ನು ಕೊಡಲಾಗಿದೆ ಎಂದು ಹೇಳಿದ್ದೀರಿ. ಈ ದೋಣಿಗಳನ್ನು ಯಾರಿಗೆ ಯಾವ ಆಧಾರದಮೇಲೆ ಕೊಡುತ್ತಿದ್ದೀರಿ? ಈ ದೋಣಿಗಳನ್ನು ಹೆಚ್ಚಾಗಿ ಶ್ರೀಮಂತರಿಗೆ ಕೊಡುತ್ತಿದ್ದಾರೆಂಬುದು ನಿಜವೇ?

†ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾನುಗಾರರ ಟ್ರೈನಿಂಗ್ ಸೆಂಟರ್, ಮಂಗಳೂರು, ಕಾರವಾರ, ಹೊನ್ನಾವರ ಮತ್ತು ಕುಂದಾಪುರ ಹೀಗೆ ನಾಲ್ಕು ಕಡೆಗಳಲ್ಲಿ ಇವೆ. ಅಲ್ಲಿ ಟ್ರೈನಿಂಗ್ ಆದವರಿಗೆ ನಾಲ್ಕು ಜನರ ಒಂದು ಗ್ರೂಪ್ ಮಾಡಿ, ಅವರಿಗೆ ಕೊಡತಕ್ಕ ವ್ಯವಸ್ಥೆ ಇದೆ.

ಶ್ರೀ ಬಿ. ಎಂ. ಇದಿನಬ್ಬ.—ಈ ಮತ್ಸ್ಯ ಉದ್ಯಮವನ್ನು ಬಹಳ ಚೆನ್ನಾಗಿ ಮಾಡಬೇಕೆಂದು ಹೇಳುತ್ತಿದ್ದೀರಿ ಮತ್ತು ರಭಸದಿಂದ ಕೆಲಸ ಮಾಡುತ್ತಿದ್ದೀರಿ. ಆದರೆ ಇಷ್ಟರವರೆಗೆ ಒದಗಿಸಿರತಕ್ಕ ದೋಣಿಗಳ ಸಂಖ್ಯೆ 731. ಈ ಸಂಖ್ಯೆ ಬಹಳ ಕಡಿಮೆ ಎಂದು ಕಾಣುವುದಿಲ್ಲವೇ ಮತ್ತು ಅದನ್ನು ಹೆಚ್ಚು ಮಾಡಲು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಟ್ರೈನಿಂಗ್ ಸೆಂಟರಿಗೆ ಮೊದಲು ಯಾರೂ ಬರುತ್ತಾ ಇರಲಿಲ್ಲ. ಈ ಯಂತ್ರ ಚಾಲಿತ ದೋಣಿ ಎಂದರೆ ಎರ್ರಾ ಹೆದರುತ್ತಿದ್ದರು. ಅದರಿಂದಾಗಿ 731 ಕೊಡುವ ವ್ಯವಸ್ಥೆಯಾಗಿದೆ. ಇದಲ್ಲದೆ ಖಾಸಗಿ ಬ್ಯಾಂಕುಗಳು ಕೂಡ 200 ಬೋಟುಗಳನ್ನು ಕೊಟ್ಟಿದ್ದಾರೆ. ಇನ್ನು ನಾಲ್ಕನೆಯ ಯೋಜನೆಯಲ್ಲಿ ಇನ್ನೂ ಹೆಚ್ಚಾಗಿ ಕೊಡಬೇಕೆಂಬ ವಿಚಾರ ಇದೆ.

ಶ್ರೀ ಬೋಳ ರಘುರಾಮ ಶೆಟ್ಟಿ.— ಇನ್ನು 50 ಆರ್ಡರ್‌ಗಳು ಬಾಕಿ ಉಂಟು ಎಂದು ಹೇಳಿದ್ದೀರಿ ಅವರಿಗೆ ಕೊಡಲು ದೋಣಿ ಇದೆಯೇ ಮತ್ತು ಯಾವಾಗ ಕೊಡುತ್ತೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಬೋಟುಗಳನ್ನು ಸರ್ಕಾರದವರು ಕೊಡುವುದಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೋ-ಆಪರೇಟಿವ್ ಮಾರ್ಕೆಟಿಂಗ್ ಯೂನಿಯನ್ ಇದೆ. ದಕ್ಷಿಣ ಕನ್ನಡದಲ್ಲಿ ಜಿರ್ಲಾ ಕೋ-ಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಇದೆ. ಅವರು ಶಿಕ್ಷಣ ಪಡೆದಂತವರಿಗೆ, ಬೋಟು ಬಿಲ್ಡಿಂಗ್ಸ್ ಯಾರ್ಡಿನಲ್ಲಿ ಎಷ್ಟು ಬೋಟ್ಸ್‌ತಯಾರಾಗುತ್ತದೆ, ಮತ್ತು ಸರ್ಕಾರದವರು ಎಷ್ಟು ಸಬ್ಸಿಡಿಯನ್ನು ಕೊಡುತ್ತಾರೆ, ಅದನ್ನು ನೋಡಿಕೊಂಡು ಅಲಾಟ್ ಮಾಡುತ್ತಾರೆ.

ಶ್ರೀ ಎಸ್. ಕೆ. ಅಮಾನ್.—ಈಗ ವಿದೇಶಗಳಲ್ಲಿ ತಯಾರಾದ ಮ್ಯಾರಿನ್ ಇಂಜಿನುಗಳನ್ನು ಆಮದು ಮಾಡುವುದನ್ನು ಕೇಂದ್ರ ಸರ್ಕಾರದವರು ನಿಲ್ಲಿಸಿದ್ದಾರೆ. ದೇಶಿಯ ಮ್ಯಾರಿನ್ ಇಂಜಿನುಗಳನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೆ ವಿದೇಶೀ ಇಂಜಿನುಗಳ ಎರಡರಷ್ಟು ಹೆಚ್ಚು ಬೆಲೆಯಾಗುತ್ತದೆ. ಇದನ್ನು ರಿಯಾಯಿತಿ ದರದಲ್ಲಿ, ಸರ್ಕಾರದವರು ಸಬ್ಸಿಡಿ ಕೊಟ್ಟು, ಸಿಗುವಂತೆ ಮಾಡಲು ಆಲೋಚನೆ ಮಾಡುತ್ತಾರೆಯೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮೊದಲಿಗೆ ವಿದೇಶಗಳಲ್ಲಿ ಈ ಇಂಜಿನು ತಯಾರು ಮಾಡುತ್ತಿದ್ದರು. ಇಂಡಿಯಾದಲ್ಲಿ ಯಾರೂ ಅದನ್ನು ಮಾಡುತ್ತಿರಲಿಲ್ಲ. ಈಗ ನಮ್ಮ ದೇಶದಲ್ಲಿ ರಸ್ಟನ್, ಕ್ಯಾಲ್ಟನ್ ಮತ್ತು ಮೆಡೋಸ್, ಇವುಗಳನ್ನು ತಯಾರುಮಾಡತಕ್ಕ ಸಂಸ್ಥೆಗಳು ತಯಾರುಮಾಡಲು ಮುಂದೆ ಬಂದಮೇಲೆ, ಸ್ವದೇಶೀಯದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಪರದೇಶದಿಂದ ತರತಕ್ಕ ಆಮದನ್ನು 1967-68 ರಲ್ಲಿ ಇಂಡಿಯಾ ಸರ್ಕಾರದವರು ನಿಲ್ಲಿಸಿದ್ದಾರೆ. ಆದ್ದರಿಂದ ದೇಶೀಯ ಇಂಜಿನುಗಳಿಗೆ ಬೆಲೆ ಜಾಸ್ತಿಯಾಗಿದೆ.

ಶ್ರೀ ಎಸ್. ಕೆ. ಅಮಾನ್.—ನಾನು ಕೇಳಿದ್ದು ಬೇರೆ. ಸಬ್ಸಿಡಿ ಹೆಚ್ಚು ಕೊಟ್ಟು ಅದನ್ನು ಕೊಡಿಸಿಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸರ್ಕಾರದವರು ನಾಲ್ಕನೇ ಯೋಜನೆಯಲ್ಲಿ ಒಂದು ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆ ಹಣದಲ್ಲಿ ಇಂತಿಷ್ಟು ಕೊಡಬೇಕೆಂಬ ವ್ಯವಸ್ಥೆ ಇದೆ. ಈಗ ಡಬಲ್ ಸಬ್ಸಿಡಿ ಕೊಡುತ್ತಿದ್ದುದನ್ನು ಕಡಿಮೆಮಾಡಿ 50 ಪರ್‌ಸೆಂಟ್ ಇದ್ದುದನ್ನು 25 ರಷ್ಟು ಮಾಡಿ, ಬೋಟುಗಳ ಸಂಖ್ಯೆ ಜಾಸ್ತಿ ಮಾಡತಕ್ಕ ವಿಚಾರ ಈಗ ಇದೆ.

Smt. WINNIFRED F. FERNANDEZ.—What is the reason for stopping the import of marine diesel engines, whereas Indian marine engines cost more than foreign ones and also durability of Indian engines is less?

Sri H. C. LINGA REDDY.—It is the policy of the Government to encourage indigenous manufacture of engines.

ಶ್ರೀ ಎಂ. ಎಂ. ಜಾಲಸಟ್ಟಿ.—ಟ್ರೈನಿಂಗ್ ಆದವರಿಗೆ ಎಷ್ಟು ಕಾಲದ ಒಳಗೆ ಬೋಟುಗಳನ್ನು ಒದಗಿಸುತ್ತೀರಿ ? ಟ್ರೈನಿಂಗ್ ಆದವರು ಈಗ ಬಹಳ ಜನ ಇದ್ದಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಅದಷ್ಟು ಜಾಗ್ರತೆ ಒದಗಿಸುತ್ತೇವೆ.